ಬೀದರ ಕರ್ಮ ಭೂಮಿ ದಿನ ಪತ್ರಿಕೆ


BIDAR KARMA BHOOMI KANNADA NEWS PAPER

ಸಂಪಾದಕರು : ಅರವಿಂದ ಕುಮಾರ ಅರಳಿ
EDITOR : ARVIND KUMAR ARALI

Cell : +91 9980785124 / 9448114999
Email : araliarvindkumar@gmail.com

ಸಂಪುಟ:01 ಸಂಚಿಕೆ:293 ಮಂಗಳವಾರ ದಿನಾಂಕ:25–08–2026 RNI.NO.KNKAN/25/A1838 ಪುಟ.4 ಬೆಲೆ.2.00

ಕುಂಬರವಾಡಕ್ಕೆ ಅಂಬೇಡ್ಕರ ಸಮುದಾಯ ಭವನಕ್ಕಾಗಿ ಜಾಗ ಮಂಜೂರಿಗೆ ಆಗ್ರಹಃ ಶಿವಲಿಂಗಪ್ಪ ಕಡೆಮನಿ.



ಬೀದರಃ ಶುದ್ಧೊ ಜಾಗವಿರುತ್ತದೆ. 2001 ೀಧನ ಮಹಾಮಾಯೆ ರಿಂದ ಈ ಜಾಗದಲ್ಲಿ ಸಾಮಾಜಿಕ ಮತ್ತು ಸಂವಿಧಾನ ಶಿಲ್ಪಿ ಡಾ. ಸಾಂಸ್ಕೃತಿಕ ಸಂಘ ಬಿ ಆರ್ ಅಂಬೇಡ್ಕರ ಕುಂಬರವಾಡ ಬೀದರ ಜಯಂತಿ, ರವಾ ವತಿಯಿಂದ ಕುಂಬ ತಾಯಿ ಜಯಂತಿ, ರವಾಡ ಸರ್ವೆ ನಂ ಬುದ್ಧಪೂರ್ಣಿವಾ, 51/1 ರಲ್ಲಿ 75 ಮತ್ತು ವಿಜಯದಶಮಿ ಮ 80 ಅಡಿ ವಿಸ್ತೀರ್ಣದ ಹಾಪರಿನಿಬ್ಬಾಣ, ಸಭೆ ಸರ್ಕಾರಿ ಗೋಮಾಳ ಸಮಾರಂಭ ಸಾಂ ಸ್ಕೃತಿಕಕಾರ್ಯ ಕ್ರಮ ಗಳು ಪೇಂಟಲಗಳು ಟೆಂಟ್ ಹಾಕಿಕೊಂಡು ಕಾರ್ಯಕ್ರಮಗಳನ್ನು ಮಾಡಿಕೊಂಡು ಬಂದಿರುತ್ತೇವೆ. ಪರಿ ಶಿಷ್ಟ ಜಾತಿ ಬಲಗೈಯಿ ಸಮುದಾಯಕ್ಕೆ ಸಂಬಂಧಿಸಿದ 500 ಕುಟುಂಬಗಳು ಇವೆ. ಕೃಷಿ ಕಾರ್ಮಿಕರು ಕಟ್ಟಡ ಕಾರ್ಮಿಕರು ಹೋಟಲ ಕಾರ್ಮಿಕರು, ವಿವಿಧ ಕಂಪನಿಗಳಲ್ಲಿ ಖಾರ ಖಾನೆಗಳಲ್ಲಿ ಕೆಲಸ ಮಾಡುವಬಡ ಜನರು ವಾಸವಾಗಿರುವ ಈ ಸ್ಥಳದಲ್ಲಿ ವಿಶ್ವಜ್ಞಾನಿ ಸಂ ವಿಧಾನ ಶಿಲ್ಪಿ ಆಧುನಿಕ ಭಾರತದ ನಿರ್ಮಾಪಕ ಡಾ. ಬಿ ಆರ್ ಅಂಬೇ ಡ್ಕರ ಸಮುದಾಯ ಭವನನಿಮಾ ರ್ಣವಾದರೆ,ಇಲ್ಲಿವಾ ಸವಾಗಿರುವಬಡವರಿಗೆ ಅನುಕೂಲವಾಗುತ್ತದೆ, ಸದರಿ ಸರ್ವೆ ನಂ 51/1 ರಲ್ಲಿನ ಜಾಗದಲ್ಲಿ, ರಾಮಮಂದಿರ ಹನುಮಾನಮಂದಿರ ಮಜೀದ,ಹಾಗೂ ಚರ್ಚುಗಳು ನಿರ್ಮಾಣ ಮಾಡಿಕೊಂಡುತಮ್ಮ ಧಾರ್ಮಿಕ, ಸಾಂಸ್ಕೃತಿಕ ಸಭೆ ಸಮಾರಂಭಗಳು, ವಿವಾಹ ಕಾರ್ಯ ಕ್ರಮಗಳು ಮಾಡಿಕೊಳ್ಳುತ್ತಾ ಬರುತ್ತಿದ್ದಾರೆ. ನಾವು ನಮ್ಮವರು ಎನ್ನುವ ಸಾಮಾಜಿಕ ದಾರ್ಮಿಕ ಸಹಿಷ್ಣತೆ ಯಲ್ಲಿ ಜೀವನ ನಡೆಸುವ ಜನರಿದ್ದಾರೆ. ಬೆಲೆ ಏರಿಕೆಯಲ್ಲಿ ಇಂದಿ ಪರಿಸ್ಥಿಯಲ್ಲಿ ಬಡವರು ತಮ್ಮದುಡಿಮೆಯಲ್ಲಿ ಉಪಜೀವನನಡೆಸುವುದು ಕಷ್ಟವಾಗುತ್ತಿದೆ.ಸಭೆ ಸಮಾರಂಭಗಳು ಸಾಂಸ್ಕೃತಿಕ ಕಾರ್ಯ ಕ್ರಮಗಳು ಮದುವೆ ಸಮಾರಂಭಗಳನ್ನು ನಡೆಸಲು ಸದರಿ ಸರ್ವೆ ನಂ 51/1 ರಲ್ಲಿ ಉಳಿದಿರುವ 75 ಮತ್ತು 80 ವಿಸ್ತೀರ್ಣದ ಜಾಗದಲ್ಲಿ ಅಂಬೇಡ್ಕರ ಸಮುದಾಯ ಭವನ ನಿರ್ಮಾಣವಾಗಿದ್ದರೆ, ಇಲ್ಲಿನಜನರಿಗೆ ಅನಕೂಲವಾಗುತ್ತದೆಯೆಂದು

ಬೀದಿ ವ್ಯಾಪಾರಿಗಳ ಶುಲ್ಕ ಏರಿಕೆ ವಿರೋಧಿಸಿ ಬಿಜೆಪಿ ಪ್ರತಿಭಟನೆಬಡ ವ್ಯಾಪಾರಿಗಳ ಮೇಲೆ ಹೆಚ್ಚುವರಿ ಶುಲ್ಕದ ಹೊರೆ ಹಾಕಬೇಡಿ: ಸೋಮನಾಥ ಪಾಟೀಲ್



ಬೀದರ್:ಬೀದಿ ವ್ಯಾಪಾರಿಗಳಿಂದ ನಗರ ಪಾಲಿಕೆ ವಸೂಲಿ ಮಾಡುತ್ತಿರುವ ಶುಲ್ಕವನ್ನು ರೂ.20ರಿಂದ 60ಕ್ಕೆ ಏರಿಸಿರುವುದನ್ನು ವಿರೋಧಿಸಿ ಭಾರತೀಯ ಜನತಾ ಪಕ್ಷದ ಬೀದರ ನಗರ ಘಟಕ ವತಿಯಿಂದ ಸೋಮವಾರ ನಗರದಲ್ಲಿ ಪ್ರತಿಭ'ಟನೆ ನ'ಡೆಸ ಲಾಯಿತು. ನಗರದ ಗಣೇಶ್ ಮೈದಾನದಿಂದ ನಗರ ಪಾಲಿಕೆ ಕಚೇರಿವರೆಗೆ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ಪ್ರತಿಭ'ಟನಾ ಮೆರವಣಿಗೆ ನಡೆಸಿ,ಬಳಿಕ ಮಹಾನಗರ ಪಾಲಿಕೆ ಆಯುಕ್ತರಿಗೆ ಮನವಿ ಸಲ್ಲಿಸಿದರು. ಬಡ ಬೀದಿ ವ್ಯಾಪಾರಿಗಳ ಮೇಲೆ ಹೆಚ್ಚುವರಿ ಶುಲ್ಕದ ಹೊರೆ ಹಾಕಬಾರದು. ಈಗಾಗಲೇ ಜೀವನ ನಿರ್ವಹಣೆಗೆ ಕಷ್ಟಪಡುತ್ತಿರುವ ಸಣ್ಣ ವ್ಯಾಪಾರಿಗಳಿಂದ ದಿನಕ್ಕೆ ರೂ.60 ಶುಲ್ಕ ವಸೂಲಿ ಮಾಡುವ ಕ್ರಮವನ್ನು ಕೂಡಲೇ ಹಿಂಪಡೆಯಬೇಕು ಎಂದುಪ್ರತಿಭ'ಟನಾಕಾರರು ಒತ್ತಾಯಿಸಿದರು. ಈಕುರಿತು ಮಾತನಾಡಿದ ಬಿಜೆಪಿ ಜಿಲ್ಲಾ ಅಧ್ಯಕ್ಷ ಸೋಮನಾಥ ಪಾಟೀಲ್, "ಬೀದಿ ವ್ಯಾಪಾರಿಗಳ ಶುಲ್ಕವನ್ನು ರೂ.20ರಿಂದ ರೂ.60ಕ್ಕೆ ಏರಿಸಿರುವುದು ಬಡ ವ್ಯಾಪಾರಿಗಳಿಗೆ ಅನ್ಯಾಯವಾಗಿದೆ. ಶುಲ್ಕ ವಸೂಲಿ ಮಾಡುವ ಅಧಿಕಾರ ಯಾರಿಗೆ ನೀಡಲಾಗಿದೆ, ಟೆಂಡರ್ ಪ್ರಕ್ರಿಯೆ ಹೇಗೆ ನಡೆದಿದೆ,

ಗಡಿ ತಾಂಡಾಗಳಲ್ಲಿ ಉದ್ಯೋಗ ಸೃಷ್ಟಿಸಿ ವಲಸೆ ತಡೆಯಿರಿ: ಜಿಪಂ ಸಿಇಒ

ಔರಾದ್: ತೆಲಂಗಾಣ ಹಾಗೂ ಮಹಾರಾಷ್ಟ್ರ ಗಡಿಯಲ್ಲಿನ ತಾಂ ಡಾಗಳಕೂಲಿ ಕಾಮಿ ರ್ಕರು ಉದ್ಯೋಗಕ್ಕಾಗಿ ವಲಸೆ ಹೋಗುವುದನ್ನು ತಡೆಯಲು ವಿಬಿ–ಜಿ ರಾಮ್‌ಜಿಯೋಜ ನೆ ಯಡಿಹೆಚ್ಚು ಉದ್ಯೋಗ ಸೃಷ್ಟಿಸಿಕೂಲಿ ಕಾರ್ಮಿಕ ರಿಗೆ ಕೆಲಸ ನೀಡಬೇಕು ಎಂದುಜಿಲ್ಲಾ ಪಂಚಾ ಯತ್‌ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಡಾ. ಗಿರೀಶ್ ದಿಲೀಪ್ ಬದೋಲೆಅದಿ ,ಕಾರಿ ಗಳಿಗೆ ಸೂಚಿಸಿದರು. ತಾಲೂಕು ಪಂಚಾ ಯತ್ ಸಭಾಂಗಣದಲ್ಲಿ ಗುರುವಾರ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತ ನಾಡಿದ ಅವರು, ಗಡಿ ಭಾಗದ ತಾಂಡಾಗಳಲ್ಲಿ ಪ್ರತಿನಿತ್ಯಹೆಚ್ಚಿನ ಸಂಖ್ಯೆ ಯಕೂಲಿ ಕಾರ್ಮಿಕರಿಗೆ ಕೆಲಸ ದೊರೆಯುವಂತೆ ಕಾಮಗಾರಿಗಳನ್ನು ಕೈಗೊಳ್ಳಬೇಕು. ಗ್ರಾಮದಲ್ಲಿಯೇ ನಿರಂತರ ಉದ್ಯೋಗ ಲಭ್ಯವಾದರೆ ಕಾರ್ಮಿಕರವಲ ಸೆಯನ್ನುಪರಿಣಾ ಮಕಾರಿಯಾಗಿತಡೆಯಲು ಸಾಧ್ಯವಾಗುತ್ತದೆ ಎಂ ದರು. ತಾಲೂಕಿನ ಎಲ್ಲ ಗ್ರಾಮ



ಪಂಚಾಯಿತಿಗಳ ವ್ಯಾಪಿ ್ತಿಯಲ್ಲಿಹೆಚ್ಚಿನ ಸಮು ದಾಯಕಾಮ ಗಾರಿಗ ಳನ್ನು ಗುರುತಿಸಿ ಅನುಷ್ಠಾನಗೊಳಿಸುವ ಮೂಲಕ ಹೆಚ್ಚು ಮಾನವ ದಿನಗಳನ್ನು ಸೃಜಿಸಬೇಕು. ಕಾಮಗಾರಿಗಳ ಬೇಡಿಕೆ ಇರುವ ಕಡೆ ತಕ್ಷಣ ಕೆಲಸಆರಂಭಿಸಿ, ಕೂಲಿ ಕಾರ್ಮಿಕರಿಗೆ ನಿರಂತರ ಉದ್ಯೋಗ ಕಲ್ಪಿಸುವಂತೆ ತಾಕೀತು ಮಾಡಿದರು. ನಿಷ್ಕ್ರಿಯಜಾಬ್ ಕಾರ್ಡ್ಗ ಳನ್ನು ಪರಿಶೀಲಿಸಿ, ಅರ್ಹ ಫಲಾನುಭವಿಗಳ ಜಾಬ್ ಕಾರ್ಡ್ಗಳನ್ನು ಸಕ್ರಿ ಯವಾಗಿಮಾ ಡಿಸ ಬೇಕು ಸೂಚಿಸಿದರು. ಅರ್ಹಕೂಲಿ ಕಾಮಿ ರ್ಕರಿಂದ ಉದ್ಯೋಗದ ಬೇಡಿಕೆ ಪಡೆದು, ಅವರಿಗೆ ಸಮಯಕ್ಕೆ ಸರಿಯಾಗಿಕೆಲಸ ಒದಗಿ ಸುವಮೂಲಕ ಯೋ ಜನೆಯಪ್ರಯೋ ಜನ ವನ್ನು ಸಮರ್ಪಕವಾಗಿ ತಲುಪಿಸಬೇಕು ಎಂದು ಹೇಳಿದರು. ಇದೇ ವೇಳೆ ಜಿಲ್ಲಾ ಪಂಚಾಯತ್ ಸಹಾ ಯಕನಿರ್ದೇಶಕ (ಆಡಳಿ ತ) ಜಯಪ್ರಕಾಶ, ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಕಿರಣ ಪಾಟೀ ಲ್,ಸಹಾಯಕ ನಿರ್ದೇಶಕ(ಗ್ರಾ.ಉ)ಶಿವಕುಮಾರ ಘಾಟೆ, ಎಡಿಪಿಸಿ ದೀಪಕ ಕಡಿಮನಿ, ತಾಲೂಕಿನ ಎಲ್ಲ ಪಿಡಿಒ ಅವರು, ತಾಂತ್ರಿಕ ಸಂಯೋಜಕ ಆನಂದ ಕಾಳಗಾಪೂರೆ, ತಾಂತ್ರಿಕ ಸಹಾಯಕರು, ಐಇಸಿ ಸಂಯೋಜಕ, ಎನ್ಆರ್ಎಲ್ಎಂ ಸಿಬ್ಬಂದಿ ಯವರು ಹಾಜರಿದ್ದರು.

ಹಾಳಾದ ಗ್ರಾಮೀಣ ರಸ್ತೆಗಳ ತುರ್ತು ದುರಸ್ತಿಗೆ ಶಾಸಕ ಪ್ರಭು ಚವ್ಹಾಣ ಒತ್ತಾಯ


ಔರಾದಹಾಗೂ ಕಮಲನಗರ ತಾಲ್ಲೂಕುಗಳಲ್ಲಿ ಕಳೆದ ವರ್ಷ ಸುರಿದ ಭಾರೀ ಮಳೆಯಿಂದ ಹಾನಿಗೊಳಗಾದ ಗ್ರಾಮೀಣ ರಸ್ತೆಗಳ ದುರಸ್ತಿ ಹಾಗೂಅಭಿವೃ ದ್ಧಿಪಡಿಸ 'ಬೇಕೆಂದು ಶಾಸಕರು ಹಾಗೂಮಾಜಿ ಸಚಿವರಾದ ಪ್ರಭು ಬಿ.ಚವ್ಹಾಣ ಅವರುಗ್ರಾಮೀ ಣಾಬಿವೃದ್ಧಿಮತ್ತು ಪಂಚಾಯತ ರಾಜ್ಇಲಾಖೆ ಸಚಿವರಾದ ಈಶ್ವರ ಖಂಡ್ರೆ ಅವರನ್ನು ಒತ್ತಾಯಿಸಿದ್ದಾರೆಬೆಂಗಳೂರಿನಲ್ಲಿ ಸಚಿವರನ್ನು ಖುದ್ದಾಗಿ ಭೇಟಿ ಮಾಡಿ ಮನವಿ ಪತ್ರ ಸಲ್ಲಿಸಿದ ಅವರು, ಕ್ಷೇತ್ರದಅನೇಕ ಗ್ರಾಮೀಣ ರಸ್ತೆಗಳು ಮಳೆಯಿಂದ ತೀವ್ರವಾಗಿಹಾನಿ ಗೊಳಗಾಗಿದ್ದು,ರಸ್ತೆಗಳು ಗುಂಡಿ ಮಯವಾಗಿವೆ. ಇದ 'ರಿಂದ ಸಾರ್ವಜನಿಕರು, ವಿದ್ಯಾರ್ಥಿಗಳು, ರೈತರು ಹಾಗೂವಾಹನ ಸವಾರ 'ರುಪ್ರತಿನಿತ್ಯ ತೀವ್ರ ತೊಂ ದರೆಅನುಭ ವಿಸುತ್ತಿದ್ದಾರೆ. ತುರ್ತುವೈದ್ಯಕೀಯ ಸೇವೆ ಗಾಗಿ ಆಸ್ಪತ್ರೆಗೆ ತೆರಳುವ ರೋಗಿಗಳು, ಶಾಲಾ–ಕಾಲೇಜುಗಳಿಗೆ ತೆರಳುವ ವಿದ್ಯಾರ್ಥಿಗಳು ಹಾಗೂ ರೈತರುತಮ್ಮಕೃಷಿ ಉತ್ಪನ್ನ ಮತ್ತು ದವಸ–ಧಾನ್ಯಗಳನ್ನುಪಳ್ಳಿಎಂ.ಎಸ್ ನಾಗೂರ ಎಂ ರಸ್ತೆ, ವಲ್ಲೇಪೂರ–ಕಂದಗೂಳ ಹಸ್ಸಿಖೇರಾ–ಗೌಂಡಗಾಂವ, ಕಮ ಲನಗರ–ಸೋನಾಳವಾಡಿ, ಮುರ್ಗ್–ದೇವಣಿ, ಚಿಟ್ಟಿ(ಜೆ)–ಜಂಬಗಿ, ಹಸ್ಸಿಖೇರಾ–ತಾಂಡಾ, ಮುರ್ಗ್–ಎಚ್50 ,ಕಮ 'ಲನಗರಸೋನಾಳ, ವಡಗಾಂವ–ಕೌತಾ ,ಧೂ 'ಗೇರಾ ಕ್ರಾಸ್, ಎಕಲಾರ–ತೇಗಂಪೂರ, ಬಜರಂಗ್ ತಾಂಡಾ–ಚಿಂತಾಮಣಿ ತಾಂಡಾ, ಶಂಬೆಳ್ಳಿ–ಎ???ಚ್ ಸೇರಿದಂತೆ ಅತ್ಯಂತಅವಶ್ಯಕ'ವಾಗಿ ರುವ ವಿವಿಧ' ರಸ್ತೆಗಳನ್ನು ತುರ್ತುಆದ್ಯತೆಯಮೇರೆಗೆಸುಧಾರಿಸಿಅಭಿವೃದ್ಧಿಪಡಿಸುವಂತೆತಿಳಿಸಿದ್ದಾರೆ.



ಎ???ಚ್–15– ಕುನ 'ಮಾರಪಳ್ಳಿ ಬಾ ರ್ಡರ್, ವಾಗನಗೇರಾ–ವಾಗನ 'ಗೇರಾ ಕ್ರಾಸ್, ಎಕಲಾರ–ತೇಗಂಪೂರ, ಬಜರಂಗ್ ತಾಂಡಾ–ಚಿಂತಾಮಣಿ ತಾಂಡಾ, ಶಂಬೆಳ್ಳಿ–ಎ???ಚ್ ಸೇರಿದಂತೆ ಅತ್ಯಂತಅವಶ್ಯಕ'ವಾಗಿ ರುವ ವಿವಿಧ' ರಸ್ತೆಗಳನ್ನು ತುರ್ತುಆದ್ಯತೆಯಮೇರೆಗೆಸುಧಾರಿಸಿಅಭಿವೃದ್ಧಿಪಡಿಸುವಂತೆತಿಳಿಸಿದ್ದಾರೆ.

ನರಸಾಪುರ ಹೋಬಳಿ ಮಟ್ಟದ ಜೆಡಿಎಸ್ ಸಮಾವೇಶ

ಕೋಲಾರ,ಆ,24– ವಿಧಾನ ಸಭಾ ಕ್ಷೇತ್ರದ ಹಳ್ಳಿಗಳಲ್ಲಿ ರಾಜ್ ಕರೆ ನೀಡಿದರು. ಜೆಡಿಎಸ್ ಪಕ್ಷವನ್ನು ತಾಲೂಕಿನ ನರಸಾಪುರ ಬಲಪಡಿಸುವುದೇ ನಮ್ಮ ಕೈಗಾರಿಕಾ ಪ್ರದೇಶದಲ್ಲಿ ಬೇಕೆಂ ದರುರಾಜ್ಯದಲ್ಲಿ



ಪ್ರಮುಖ ಗುರಿಯಾಗಿದ್ದು, ಭಾನುವಾರ ಜೆಡಿಎಸ್ ಪಕ್ಷದ ಹೈಕಮಾಂಡ್ ಯಾರಿಗ ಬಿ ಪಾರಂ ನೀಡಿಟಿಕೆಟ್‌ನೀಡು ತ್ತದೆಯೋ ಅವರ ಪರವಾಗಿ ಕಾರ್ಯಕರ್ತರು ಒಗ್ಗ ಟ್ಟಿನಿಂದ ಕೆಲಸ ಮಾಡಿ ಗಲ್ಲಿಸಬೇಕು. ಮುಂದಿನ ದಿನಗಳಲ್ಲಿ ಎಚ್.ಡಿ. ಕು ಮಾರಸ್ವಾಮಿ ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಬೇಕು ಎಂದು ಕೋಮುಲ್ ನಿರ್ದೇಶಕ ಜೆಡಿಎಸ್ ಶಾಸಕರನ್ನು ಆಯ್ಕೆ ಮಾಡುವ ನಿಟ್ಟಿನಲ್ಲಿ ಎಲ್ಲರೂಶ್ರಮಿ ಬೇಕೆಂ ದರುರಾಜ್ಯದಲ್ಲಿ ಭಾನುವಾರ ಜೆಡಿಎಸ್ ವತಿಯಿಂದಆಯೋ ಜಿಸಿದ್ದ ಹೋಬಳಿ ಮಟ್ಟದ ಕಾರ್ಯಕರ್ತರ ಸಮಾ ವೇಶದಲ್ಲಿಅವರು ಮಾತ ನಾಡಿ,ಕಾಯ ರ್ಕರ್ತರೇ ಪಕ್ಷದಆಸ್ತಿಪಕ್ಷದ ಸೂಚ ನೆಯಂತೆ ಪ್ರತಿಯೊಂದು ಹಳ್ಳಿಗೂತೆರಳಿ ಮತ ದಾರರುಹಾಗೂ ಕಾರ್ಯ ಕರ್ತರನ್ನು ಭೇಟಿಮಾಡಿ ಸಂಘಟನೆಬಲಪಡಿಸಬೇ ಕು. ಕೋಲಾರದಲ್ಲಿ ಹೆಚ್.ಡಿ ಕುಮಾರಸ್ವಾಮಿ ಅವರು ಎರಡುಬಾರಿ ಮುಖ್ಯಮಂತ್ರಿಯಾ ಗಿದ್ದರೂಪೂರ್ಣಬಹು ಮತದಸರ್ಕಾರ ನಡ ಸಲು ಸಾಧ್ಯವಾಗಿಲ್ಲ. ಈ ಬಾರಿಅವರಿಗಪೂರ್ಣ ಬಹುಮತದಐದು ವಷ ರ್ಗಳಕಾಲಅವ ಕಾಶನಿ ಡಿದರದೇಶಕ್ಕ ಮಾದರಿ ಯಾಗುವರೀ ತಿಯ ಲ್ಲಿರಾಜ್ಯ ವನ್ನುಅಭಿವೃದಿ ಪಡಿಸ ಲಿದ್ದಾರ.

ವೀರಶೈವ ಲಿಂಗಾಯಿತ ರುದ್ರಭೂಮಿ ಅಭಿವೃದ್ದಿಗೆ ಮಂಜುನಾಥ್ ಭರವಸೆ

ಕೋಲಾರ,ಆ,24– ನಗರದ ಹಾರೋಹಳ್ಳಿಯ ಮುಖ್ಯರಸ್ತೆಯಲ್ಲಿ ವೀರ ಶೈವಲಿಂಗಾಯಿತ ಸಮು ದಾಯದರುದ ್ರಭೂಮಿ ಯ ಭೂಮಿ ಭದ್ರತೆಗೆ ಹಾಗೂಮೂಲ ಭೂತ ಸೌಲಭ್ಯಗಳೊಂದಿಗೆ ಅಭಿವೃದ್ದಿಗೆ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಶಾಸಕ ಕೊತ್ತೂರು.ಡಾ.ಜಿ .ಮಂ ಜುನಾಥ್‌ಭರವಸೆ ನೀ ಡಿದರು.ಅಲ್ಲಿನ ಕುಂದು ಕೊರತೆಗಳನ್ನು ಪರಿ ಶೀಲಿಸಿಅವರು ಮಾತ ನಾಡಿನಗರದ ಹಾರೋ ಹಳ್ಳಿ ವಾರ್ಡ್ ಸಂಖ್ಯೆ 15ರಲ್ಲಿನ ವೀರಶೈವ ಲಿಂಗಾಯಿತ ಸಮು ದಾಯದ ರುದ್ರಭೂಮಿ ಸಮಿತಿಯವರ ಮನವಿ ಮೇರೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಸಮಿ ತಿಯರುಈ ರುದ್ರ ಭೂಮಿಗೆ ಸರ್ಕಾರವು 4 ಎಕರೆ ಭೂಮಿಯನ್ನು ಮಂಜೂರು ಮಾಡಿತ್ತು ಅದರೆ ಅಕ್ಕ ಪಕ್ಕದವರು



ಒತ್ತುವರಿಮಾಡಿ ರುವು ದರಿಂದಪ್ರಸ್ತುತ ಮೂರು ವರೆಎಕರೆಮಾತ್ರ ಉಳಿ ದಿದೆಎಂದು ದೂರಿ ದರು.ಶಾಸಕರು ಇದಕ್ಕೆ ಪ್ರತಿಕ್ರಿಯಿಸಿ ಸರ್ಕಾರವು ರುದ್ರಭೂಮಿಗೆ ಮಂಜೂರು ಮಾಡಿರುವ ಭೂಮಿಯನ್ನು ಸರ್ವೆ ಮಾಡಿಸಿ,ಒತ್ತುವರಿ ಯಾಗದಂತೆ ಭದ್ರತೆ ಗಾಗಿಕಾಪೌಂಡ್ ಗೋ ಡೆನಿರ್ಮಾಣ, ಕುಡಿ ಯವನೀರಿಗಾಗಿ ಬೋ ರ್‌ವೆಲ್, ಹಾಗೂ ಸಾರ್ವಜನಿಕರ ಅನು ಕೂಲಕ್ಕಾಗಿಶೆಡ್ ಮತ್ತು ಕೊಠಡಿಯೊಂದನ್ನು ನಿರ್ಮಿಸಿಕೊಡು ವುದಾಗಿ ಶಾಸ ಕರುಭರವಸೆನೀಡಿ ದರು.ನಂ ತರದಲ್ಲಿ ರಾಷ್ಟ್ರೀಯ ಹೆದ್ದಾರಿ 75 ಸಂರ್ಪಕದಿಂದ ಹಾರೋ ಹಳ್ಳಿಯವೀರ ಅಂಜನೇಯ ಸ್ವಾಮಿದೇವಾಲದವರೆಗೆ ಹೊಸದಾಗಿಸಿ.ಸಿ.ರಸ್ತೆ ಕಾಮ ಗಾರಿಗೆ90 ಲಕ್ಷ ರೂಗಳನ್ನು ಬಿಡುಗಡೆ ಮಾಡುವುದಾಗಿ ಆಶ್ವಾಸನೆನೀಡಿದರು. ನಂ ತರದಲ್ಲಿ ಹಾರೋಹಳ್ಳಿಯ ಶ್ರೀ ವೀರಾಂಜನೇಯ ಸ್ವಾಮಿ ದೇವಾಲಯದಲ್ಲಿ ಆಯೋಜಿಸಿದ್ದ ಮೂರನೇ ವಾರ್ಷಿಕೋತ್ಸವ ಕಾಯ ರ್ಕ್ರಮದಲ್ಲಿಭಾಗವಹಿಸಿದರು.

ಶಿಡ್ಲಘಟ್ಟದಲ್ಲಿ ಸಚಿವ ಕೆ.ಹೆಚ್. ಮುನಿಯಪ್ಪ ಅಭಿನಂದನೆ

ಶಿಡ್ಲಘಟ್ಟ:–ಆ24–ಸಮಾಜ ಕಲ್ಯಾಣ ಇಲಾಖೆ ಸಚಿವ ಕೆ.ಹೆಚ್. ಮುನಿಯಪ್ಪ ಚಿಂತಾಮಣಿಯ ಅಂಬೇಡ್ಕರ್ ಭವನದ ಉದ್ಘಾಟನಾ ಸಮಾರಂಭಕ್ಕೆ ತೆರಳುವ ಮಾರ್ಗಮಧ್ಯೆ ಶಿಡ್ಲಘಟ್ಟಕ್ಕೆ ಆಗಮಿಸಿದ ಸಂದರ್ಭದಲ್ಲಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮುಖಂಡ ಬಿ.ವಿ. ರಾಜೀವ್ ಗೌಡ ಆತ್ಮೀಯವಾಗಿ ಅಭಿನಂದಿಸಿದರು.ಈ ಸಂದರ್ಭದಲ್ಲಿ ಸಚಿವ ಕೆ.ಹೆಚ್. ಮುನಿಯಪ್ಪ ಜೊತೆ ಕೆಲಕಾಲ ಮಾತುಕತೆ ನಡೆಸಿದ ರಾಜೀವ್‌ಗೌಡರು,ಕ್ಷೇತ್ರದ ಅಭಿವೃದ್ಧಿ, ಜನಪರ ವಿಚಾರಗಳು ಹಾಗೂ ಪಕ್ಷದ ಸಂಘಟನೆಗೆ ಸಂಬಂಧಿಸಿದಂತೆ ಚರ್ಚಿಸಿದರು.

ನಂತರ ಚಿಂತಾಮಣಿಯ ಕಾಂಗ್ರೆಸ್ ಮುಖಂಡರಾದ ಜೆ.ಪಿ. ನಾರಾಯಣಸ್ವಾಮಿ ಅವರ ನಿವಾಸಕ್ಕೆ ಭೇಟಿ ನೀಡಿದ ಸಚಿವರು, ಸ್ಥಳೀಯ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರೊಂದಿಗೆ ಆತ್ಮೀಯವಾಗಿ ಸಮಾಲೋಚನೆ ನಡೆಸಿದರು.



ಕರಾವಳಿಯಲ್ಲಿ ಅಡಿಕೆ ರೋಗ ತಡೆಗೆ ಕೇಂದ್ರದಿಂದ ಬೆಂಬಲ; ಕ್ಯಾ. ಚೌಟಗೆ ಸಚಿವ ಶಿವರಾಜ್ ಚೌಹಾಣ್ ಭರವಸೆ



ಮಂಗಳೂರು–ದಕ್ಷಿಣ ಕನ್ನಡಸೇರಿದಂತೆ ಕನಾ ರ್ಟಕದಕರಾವಳಿ ಹಾಗೂ ಮಲೆನಾಡು ಪ್ರದೇ ಶಗಳಲ್ಲಿಅಡಿಕೆ ಬೆಳೆಗೆ ಬಾಧಿಸಿರುವಎಲೆ ಚುಕ್ಕಿ ಯಂತಹವಿವಿಧ ರೋಗ ಗಳನಿಯಂತ್ರಣಕ್ಕೆ ವೈಜ್ಞಾನಿಕ ಸಂಶೋಧನೆ, ಕ್ಷೇತ್ರ ಸಮೀಕ್ಷೆ ಹಾಗೂ ಸಮಗ್ರರೋಗ ನಿರ್ವಹಣಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಕೇಂದ್ರ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರು ದಕ್ಷಿಣ ಕನ್ನಡ ಸಂಸದ ಕ್ಯಾ. ಬ್ರಿಜೇಶ್ ಚೌಟಅವರಿಗೆ ತಿಳಿಸಿ ದ್ದಾರೆ.ಲೋಕಸಭೆಯಲ್ಲಿ ನಿಯಮ377ರ ಅಡಿ ಯಲ್ಲಿಕ್ಯಾ. ಚೌಟ ಅವರು ಪ್ರಸ್ತಾಪಿಸಿರುವ ಈ ವಿಷಯಕ್ಕೆ ಉತ್ತರಿಸಿರುವ ಸಚಿವರು, ಈ ಮಾಹಿತಿ ಹಂಚಿಕೊಂಡಿದ್ದಾರೆ. ಅಡಿಕೆಬೆಳೆಗೆ ಬಾಧಿ ಸುತ್ತಿರುವ ಪ್ರಮುಖ ರೋಗಗಳ ನಿಯಂತ್ರಣಕ್ಕೆ ಕಾಸರಗೋಡಿನ ಕೇಂದ್ರ ತೋಟಗಾರಿಕಾ ಬೆಳೆಗಳ ಸಂಶೋಧನಾಸಂಸ್ಥೆಕೈಗೆ ಳ್ಳುತ್ತಿರುವ ವಿವಿಧ ಕ್ರಮಗಳ ಬಗ್ಗೆ ಸಚಿವರು ವಿವರಿಸಿದ್ದಾರೆ.ಅಡಿಕೆಗೆ ಬಾಧಿಸುವ ಹಳದಿ ಎಲೆ ರೋಗ ಹಾಗೂ ಎಲೆ ಚುಕ್ಕೆ ರೋಗ ಸೇರಿದಂತೆ ವಿವಿಧ ರೋಗಗಳ ಕುರಿತು ಸಂಶೋಧನೆ ಮತ್ತು ಕ್ಷೇತ್ರ ಮಟ್ಟದ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಬೆಳ್ತಂಗಡಿ ಹಾಗೂಸುಳ್ಯ ಸೇರಿದಂತೆ ಏಳುಕ್ಲಸ್ಟರ್‌ಗಳಲ್ಲಿ ಶಿಫಾ ರಸುಮಾಡಲಾದ ಸಮಗ್ರ ರೋಗ ನಿರ್ವಹಣಾ ಪದ್ಧತಿಗಳ ಕ್ಷೇತ್ರ ಪ್ರಾತ್ಯಕ್ಷಿಕೆ ನಡೆಸಲಾಗಿದ್ದು,

ತಾಲಿಬಾನ್ ಸಂಸ್ಕೃತಿ ಮಾಜಿ ಸಂಸದ ನಳಿನ್ ಕುಮಾರ್ ಕಟೀಲ್ ವಾಗ್ದಾಳಿ

ಪುತ್ತೂರು; ಸಣ್ಣ ವಿಚಾರವೊಂದನ್ನುಮು ಂದಿಟ್ಟುಕೊಂಡು ಪುತ್ತೂರಿನ ದರ್ಬೆಯಲ್ಲಿ ಮಹಿಳೆ ಮೇಲೆಹಲ್ಲೆ ಮಾಡಿರುವ ಘಟನೆಖಂಡ ನೀಯ ವಾಗಿದೆ. ರಾಜ್ಯದಲ್ಲಿ ಕಾಂಗ್ರೆಸ್ ಆಡಳಿತ ಬಂದಬಳಿಕಈ ರೀತಿ ಯಘಟನೆಗಳು ನಡೆ ಯುತ್ತಿವೆ. ಗೃಹಸಚಿವ ಪ್ರಿಯಾಂಕ ಖರ್ಗೆ ಇಂತಹ ಘಟನೆಗಳಿಗೆ ಬೆಂಗಾವಲಾಗಿ ನಿಂತಿ ದ್ದಾರೆ. ಪುತ್ತೂರಿನಲ್ಲಿ ಕೆಲ ತಿಂಗಳಿನಿಂದ ತಾಲಿ ಬಾನ್‌ಸಂಸ್ಕೃತಿ ಜಾರಿ ಯಲ್ಲಿದೆ ಎಂದು ಮಾಜಿ ಸಂಸದ ನಳಿನ್ ಕುಮಾರ್ ಕಟೀಲ್ ವಾಗ್ದಾಳಿ ನಡೆಸಿದರು. ಭಾನುವಾರ ದರ್ಬೆ ಘಟನೆಯಲ್ಲಿ ಗಾಯಾ ಳುಆಗಿಆಸ್ಪತ್ರೆಂ ಯಲ್ಲಿರುವ ಅಂಜನಾ ಪೈ ಅವರ ಯೋಗಕ್ಷೇಮ ವಿಚಾರಿ ಸಿದಬಳಿಕ ಮಾಧ್ಯ ಮಗಳೊಂದಿಗೆ ಅವರು ಮಾತನಾಡಿದರು.

ಅಂಗಡಿಯಲ್ಲಿ ನಡೆದ ಘಟನೆ ಬಗ್ಗೆ ಕಾನೂನು ಅಥವಾ ಪೊಲೀಸ್ ಇಲಾಖೆ ಮೂಲಕ ಬಗೆ ಭಾಗದಿಂದ ಬಂದು



ಹರಿಸಬಹುದಿತ್ತು. ಅದು ಬಿಟ್ಟುಏಕಾಏಕಿ ಮಹಿಳೆ ಯಮೇಲೆಹಲ್ಲೆ ನಡೆಸ ಲಾಗಿದೆ.ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ. ಈ ಘಟನೆ ಬಗ್ಗೆ ಪುತ್ತೂರಿನ ಶಾಸಕರು ಮತ್ತು ಗೃಹಸಚಿವರು ಮೌನವಾಗಿದ್ದಾರೆ. ಈ ಘಟನೆಯು ಹಿಂದೆ ಕಾಣದ ಶಕ್ತಿಗಳ ಕೈವಾಡ ಇದೆ ಎಂಬ ಸಂಶಯ ಇದೆ.ತಾಲೂಕಿನ ಹೊರ ಗಲಾಟೆ ಮಾಡಿದ್ದಾರೆ. ಹಲ್ಲೆಗೊಳಗಾದವರ ಮೇಲೆ 307 ಸೆಕ್ಷನ್ ಅಡಿಯಲ್ಲಿ ಪ್ರಕರಣ ದಾಖಲುಮಾಡಲಾಗಿದೆ ಆದರೆ ಅವರ ಮೇಲೆ ಯಾವುದೇ ಕ್ರಮ ಕೈಗೊಂಡಿಲ್ಲ.

ಪ್ರಿಯಾಂಕ ಖರ್ಗೆ ಬೆಂಗಾವಲು–ಪುತ್ತೂರಿನಲ್ಲಿ ಡಾ.ಅಪ್ಪ ಅವರು ನಡೆ–ನುಡಿಯ ಸಾಧಕರು

ಕಲಬುರಗಿ,ಆ.24:ಪೂಜ್ಯ ಡಾ. ಶರಣಬಸವಪ್ಪ ಅಪ್ಪ ಅವರುನುಡಿದ ಮೌಲ್ಯ ಗಳನ್ನು ತಮ್ಮ ಬದುಕಿನಲ್ಲಿ ಆಚರಿಸುವ ಮೂಲಕ ಸಮಾಜಕ್ಕೆಮಾದರಿಯಾ ದ ಸಾಧಕರು ಎಂದು ಕಮಲಾಪೂರದ ಸರಕಾರಿ ಮಹಾವಿದ್ಯಾಲಯದ ಪ್ರಾಧ್ಯಾಪಕ ಅಂಬಾ ರಾಯ ಮಡ್ಡಿ ಹೇಳಿದರು. ಅಖಿಲಭಾರತ ಶಿವಾನು ಭವಮಂಟಪ ಶರಣ ಬಸವೇಶ್ವರದೇವ ಸ್ಥಾನ ದಲ್ಲಿ ಶ್ರಾವಣ ಮಾಸದ 40 ದಿನಗಳ ಉಪನ್ಯಾಸ ಮಾಲಿಕೆಯಲ್ಲಿ ರವಿವಾರ ಪೂಜ್ಯಡಾ. ಶರಣಬಸವಪ್ಪ ಅಪ್ಪ ಅವರ ನಡೆ–ನುಡಿ ದಾಸೋಹ ವಿಷಯ ಕುರಿತುಮಾ ತನಾಡಿ ದರುಪೂಜ್ಯ ಅಪ್ಪ ಅವರು ನುಡಿದಂತೆ ನಡೆದು ಸಮಾಜ ಉನ್ನತಿಗಾಗಿ ಶ್ರಮಿಸಿದರು.ನುಡಿ ಎಂ ದರೆವ್ಯಕ್ತಿಯ ಮಾತು, ವಿಚಾರ, ಬೋಧ ನೆ ಮತ್ತು ಸಂದೇಶ. ನಡೆ ಎಂದರೆಆ ಮಾತು ಗಳನ್ನು ಜೀವನದಲ್ಲಿ



ಅನುಷ್ಠಾನಗೊಳಿಸುವ ರೀತಿ. “ಮಾತು ಒಂದು, ನಡೆ ಮತ್ತೊಂದು” ಆಗಬಾರದು ಎಂಬುದುಶರಣ ಪರಂಪ ರೆಯ ಪ್ರಮುಖ ಸಂದೇಶ. ಈದೃಷ್ಟಿಯಿಂದ ನೋಡಿ ದಾಗ,ಪೂಜ್ಯಡಾ. ಶರಣ ಬಸವಪ್ಪ ಅಪ್ಪ ಅವರ ನಡೆ–ನುಡಿ ದಾಸೋಹವೆಂದರೆ ತಾವುನಂಬಿದ ಮೌಲ್ಯ ಗಳನ್ನು ತಮ್ಮ ಬದುಕಿನ ಮೂಲಕ ಸಮಾಜಕ್ಕೆ ನೀಡಿದ ದಾಸೋಹ ಎಂದು ಹೇಳಬಹುದು. ಪೂಜ್ಯರು ಸಕಲ ಜೀವಿಗಳಲ್ಲಿ ಲೇಸನ್ನೆ ಕಾಣುತ್ತಿದ್ದರು, ಶೈಕ್ಷಣಿಕಲೋಕದ ಸಂತ ರಾದಅವರು ನಡೆ ನುಡಿಗಳು ಘನ ತೂಕದ ವ್ಯಕ್ತಿತ್ವದವರು. ತಮ್ಮ ಮಹಾದಾಸೋಹ ಸೂತ್ರಗಳಲ್ಲಿ ನಡೆ ನುಡಿ ಕುರಿತು ಹೇಳಿದವರು.

Prop: Niranjan Metre *M:8549990086*

MAHALAXMI

SUGANDH SHOPPEE

One Stop Shop For pooja



Masudi complex, Shop no.2, Ganesh Maidan Road, Mohan market Bidar-

ಪುತ್ತೂರು: ಸಕಲೇಶಪುರ–ಮಂಗಳೂರು ಮಾರ್ಗದಲ್ಲಿ ವಂದೇ ಭಾರತ್ ರೈಲಿನ ಪ್ರಾಯೋಗಿಕ ಸಂಚಾರ ಪೂರ್ಣ



ಪುತ್ತೂರು–ವಂದೇ ಭಾರತ್‌ರೈಲು ಸಕಲೇಶಪುರ?ಸುಬ್ರಹ್ಮಣ್ಯ ರೋಡ್‌ರೈಲು ನಿಲ್ದಾಣಗಳ ನಡುವಿನ ಮಾರ್ಗದಲ್ಲಿ ನಡೆಸುತ್ತಿದ್ದಪ್ರಾ ಯೋಗಿಕ ಸಂಚಾರವನ್ನು ಪೂರ್ಣಗೊಳಿಸಿದೆ. ಗುರುವಾರ ರಾತ್ರಿ ರೈಲು ಸುಬ್ರಹ್ಮಣ್ಯ ರೋಡ್ ನಿಲ್ದಾಣವನ್ನು ದಾಟಿ ಪುತ್ತೂರು ರೈಲು ನಿಲ್ದಾಣದ ಮೂಲಕ ಮಂಗಳೂರಿನತ್ತ ಸಂಚರಿಸಿತು.ಕಳೆದ ಹಲವು ದಿನಗಳಿಂದ ಸಕಲೇಶಪುರ ಮತ್ತು ಸುಬ್ರಹ್ಮಣ್ಯ ರೋಡ್ ರೈಲು ನಿಲ್ದಾಣಗಳ ನಡುವೆ ವಂದೇ ಭಾರತ್ ರೈಲಿನ ಪ್ರಾಯೋಗಿಕ ಸಂಚಾರ ನಡೆಸಲಾಗುತ್ತಿತ್ತು. ಇದೀಗ ರೈಲು ಸುಬ್ರಹ್ಮಣ್ಯ ರೋಡ್ ನಿಲ್ದಾಣವನ್ನು ದಾಟಿ ಪುತ್ತೂರು ಮೂಲಕ ಮಂಗಳೂರು ತಲುಪಿರುವುದು ಪ್ರಾಯೋಗಿಕ ಸಂಚಾರದ ಪ್ರಮುಖ ಹಂತವನ್ನು ಪೂರ್ಣಗೊಳಿಸಿದಂತಾಗಿದೆ. ಘಾಟ್ ಪ್ರದೇಶದಲ್ಲಿ ವಂದೇ ಭಾರತ್ ರೈಲು ಸಂಚರಿಸುವುದು ಹಲವು ತಾಂತ್ರಿಕ ಸವಾಲುಗಳನ್ನು ಒಳಗೊಂಡಿದೆ. ಈ ಹಿನ್ನೆಲೆಯಲ್ಲಿ ರೈಲಿನ ಸಂಚಾರವನ್ನು ಮುಂದಿನ ಹಂತಕ್ಕೆ ವಿಸ್ತರಿಸುವ ಮೊದಲು ಹಲವು ದಿನಗಳ ಕಾಲ ಪ್ರಾಯೋಗಿಕ ಸಂಚಾರ ನಡೆಸಲಾಯಿತು.

ಸೀರತ್ ಸಮಿತಿಯ ಅಧ್ಯಕ್ಷ ಫರಾಜ್–ಉಲ್–ಇಸ್ಲಾಂ ನೇತೃತ್ವದಲ್ಲಿ ಜರುಗಿದ ಭವ್ಯ ಸಭೆ



ಕಲಬುರಗಿ, ಮಿಲಾದ್–ಉನ್–ನಬಿ ಹಬ್ಬದ ಪವಿತ್ರಉತ್ಸವದ ಸಿದ್ದತೆಗಾಗಿಗುಲ್ಬರ್ಗದ ಮರ್ಕಝಿಸೀರತ್ ಸಮಿತಿಯುಮರ್ಕಝಿ ಸೀರತ್ ಸಮಿತಿಯ ಅಧ್ಯಕ್ಷರಾದ ಫರಾಜ್–ಉಲ್–ಇಸ್ಲಾಂ ಅವರ ನೇತೃತ್ವದಲ್ಲಿ ನಗರದಹಫ್ತ್ ಗುಂಬಜ್ ಮೈದಾನದಲ್ಲಿ ಸಾರ್ವಜನಿಕ ಭವ್ಯ ಸಭೆ ಜರುಗಿತು.ಈ ಸಭೆಯಲ್ಲಿ ಲೋಕಪ್ರೀಯನಮ್ಮ ಪ್ರೀತಿಯ ಪ್ರವಾದಿಹಜರತ್ ಮುಹಮ್ಮದ್ ಮುಸ್ತಫಾ (ಸಅ) ಅವರಜೀವನ, ಬೋಧನೆಗಳುಮತ್ತು ಸಂದೇಶವನ್ನುಸ್ಮರಿಸಲು ಒಟ್ಟುಗೂಡಿದ ಅನೇಕ ಗೌರವಾನ್ವಿತ ಉಲೇಮಾ–ಎ–ಕಿರಾಮ್,ಧಾರ್ಮಿಕ ವಿದ್ವಾಂಸರು, ಸಮುದಾಯದ ಹಿರಿಯರು ಮತ್ತು ಭಕ್ತರ ಉಪಸ್ಥಿತಿಯಿಂದ ಅಲಂಕರಿಸಲ್ಪಟ್ಟಿತು.ಈ ಕಾರ್ಯಕ್ರಮವು ಪ್ರವಾದಿ (ಸಅ) ಅವರಮೇಲಿನ ಪ್ರೀತಿ,ಏಕತೆ, ಸಹೋದರತ್ವ ಮತ್ತುಭಕ್ತಿಯ ಮನೋಭಾವವನ್ನುಪ್ರತಿಬಿಂಬಿಸಿತು,ಈಆಶೀವಾರ್ದದಸಂದರ್ಭದಲ್ಲಿಜನರನ್ನು ಒಟ್ಟುಗೂಡಿಸಿತು .ಅಲ್ಹಮ್ದುಲಿಲ್ಲಾಹ್,ಸಭೆಯು ಅಗಾಧ ಪ್ರತಿಕ್ರಿಯೆಯನ್ನು ಕಂಡಿತ್ತುವಂತ್ತು ಭಾಗವಹಿಸಿದ ಎಲ್ಲರ ಪ್ರಾರ್ಥನೆ ಮತ್ತು ಬೆಂಬಲದೊಂದಿಗೆ ಯಶಸ್ವಿಯಾಗಿ ಮುಕ್ತಾಯವಾಯಿತು.ಫರಾಜ್–ಉಲ್–ಇಸ್ಲಾಂ ಏಕತೆ, ಶಾಂತಿಮತ್ತು ಸಾರ್ವತ್ರಿಕ ಸಹೋದರತ್ವದ ಬಲವಾದ ಸಂದೇಶದೊಂದಿಗೆ ಸಭೆಯನ್ನು ಉದ್ದೇಶಿಸಿ ಮಾತನಾಡಿದರು,

ಮಂಗಳೂರು: ಉಳ್ಳಾಲದಿಂದ ಮೀನುಗಾರಿಕೆಗೆ ತೆರಳಿದ್ದ ಬೋಟ್ ಮುಳುಗಡೆ; ಆರು ಮಂದಿ ಮೀನುಗಾರರ ರಕ್ಷಣೆ

ಮಂಗಳೂರು–ಅಳಸಮುದ್ರ ಮೀನುಗಾರಿಕೆಗೆ ನಗರದ ಹೊರವಲಯದ ಉಳ್ಳಾಲದಿಂದ ತೆರಳಿದ್ದ ಬೋಟ್ ಮೊಂದು ಶನಿವಾರ ಸಂಜೆ ಅಳಿವೆ ಬಾಗಿಲಿನಲ್ಲಿ ನಡೆದಿದೆ. ಈ ವೇಳೆ ಬೋಟ್‌ನಲ್ಲಿದ್ದ ಆರು ಮಂದಿ ಮೀನುಗಾರರನ್ನು ಸ್ಥಳೀಯರು ರಕ್ಷಿಸಿದ್ದಾರೆ. ಇಬ್ರಾಹಿಂ ಖಲೀಲ್ ಮಾಲೀಕತ್ವದ 'ಆಯಾನ್ ಹೆಸರಿನ ಬೋಟ್ ಮೀನುಗಾರಿಕೆಮುಗಿಸಿ ದಡಕ್ಕೆ ವಾಪಸ್ ಬರುತ್ತಿದ್ದ ವೇಳೆ ಈಅವಘಡ ಸಂಭವಿಸಿದೆ. ಮೀನುಗಾರಿಕಾ ಇಲಾಖೆ ಅಧಿಕಾರಿಗಳ ಪ್ರಕಾರ,ಬೋಟ್ ನ ತಳಭಾಗ ಬಂಡೆಗೆ ಬಡಿದು ಒಡೆದಿದ್ದು, ಪರಿಣಾಮ ಬೋಟ್ ಒಳಗೆ ವೇಗವಾಗಿ ನೀರು ನುಗ್ಗಿ ಮುಳುಗಿದೆಬೋಟ್ ಮುಳುಗುತ್ತಿರುವುದನ್ನು ಗಮನಿಸಿದ ಸಮೀಪ ಗಳಲ್ಲಿನ ಮೀನುಗಾರರು ತಕ್ಷಣನೆರವಿಗೆ ಧಾವಿಸಿದ್ದಾರೆ. ಅವರು ಬೋಟ್



ನಲ್ಲಿದ್ದಎಲ್ಲಾ ಆರುಮಂದಿ ಮೀನುಗಾರರನ್ನು ರಕ್ಷಿಸಿ ದಡಕ್ಕೆ ಕರೆತಂದಿದ್ದಾರೆ. ಘಟನೆಯಲ್ಲಿ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ.

ಖಂಡ್ರೆ ಕುಮ್ಮಕ್ಕು ಇಲ್ಲ: ಸಚಿವ ಅಜಯ್ ಸಿಂಗ್



ಬೀದರ್: ಜಿಲ್ಲೆಯ ರೈತರ ಜೀವನಾಡಿ ಎನಿಸಿರುವ ಹುಮನಾಬಾದ್ ತಾಲೂಕಿನ ಹಳ್ಳಿಖೇಡ್(ಬಿ) ಸಮೀಪದ ಬೀದರ್ ಸಹಕಾರಸಕ್ಕರೆ ಕಾರ್ಖಾನೆ (ಬಿಎಸ್ಎಸ್‌ಕೆ) ಯನ್ನು ಹರಾಜುಹಾಕಿ ಹಿಂಬಾಗಿಲಿನಿಂದತಾವೇ ಇಟ್ಟುಕೊಳ್ಳಲು ಡಿಸಿಸಿ ಬ್ಯಾಂಕ್ ಅಧ್ಯಕ್ಷರಾದ ಅಮರ'ಕುಮಾರಖಂಡ್ರೆ ಪ್ರಯತ್ನಿಸುತ್ತಿದ್ದಾರೆ. ಇದರ ಹಿಂದೆ ಅವರ ಸಹೋದರರಾದ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಕುಮ್ಮಕ್ಕು ಇದೆ ಎಂದು ಬಿಜೆಪಿ ಜಿಲ್ಲಾಅಧ್ಯಕ್ಷ ಸೋಮನಾಥ ಪಾಟೀಲ್ ಗಂಭೀರ ಆರೋಪಹೊರಿಸಿದ್ದಾರೆ.ಸಾಲವಸೂಲಿ ಸಂಬಂಧ' ಬಿಎಸ್ಎಸ್‌ಕೆ ಕಾರ್ಖಾನೆಯನ್ನು ಡಿಸಿಸಿಬ್ಯಾಂಕ್ ಎರಡು ವರ್ಷದ ಹಿಂದೆ ಸಹಕಾರಾಜುಹಾಕಿತ್ತು. ಆದರೆರೈತರ ಹೋರಾಟ,ಜಿಲ್ಲೆಯಜನ'ಪ್ರತಿನಿಧಿಗಳ ಒತ್ತಡದ ನಂತರ ಸರ್ಕಾರ ಹರಾಜು ರದ್ದುಗೊಳಿಸಿತ್ತು. ಗುತ್ತಿಗೆ ವಹಿಸಿಈ ಕಾರ್ಖಾನೆಯನ್ನುಎಸ್ ಆದರ್ ಒಟಿಆಧಾರದಲ್ಲಿ ಪುನಾರಂಭಿಸಲು ಸರ್ಕಾರ ತೀರ್ಮಾನಿಸಿದೆ. ಹೀಗಿರುವಾಗ ಸರ್ಕಾರದ ಆದೇಶಕ್ಕೆ ಧಿಕ್ಕರಿಸಿ ಡಿಸಿಸಿ ಬ್ಯಾಂಕ್ ಬರುವ ಸೆ.2ರಂದು ಕಾರ್ಖಾನೆ ಹರಾಜಿಗೆನೋ ಟಿಫಿಕೇಶನ್‌ಹೊರಡಿಸಿದೆ. ಇದನ್ನುಗಮನಿಸಿದರೆ ಈಕಾರ್ಖಾನೆಗೆ ಹಿಂಬಾಗಿಲಿನಿಂದ ತಾನೇ ಇಟ್ಟುಕೊಂಡು ಇದಕ್ಕೆ ಕರಿಕಲ್ಲಿನ ಸುತ್ತುಗೋಡೆ ಹಾಕಲು ಬ್ಯಾಂಕ್ ಅಧ್ಯಕ್ಷ ಅಮರಕುಮಾರ ಖಂಡ್ರೆ ಮುಂದಾದಂತೆಕಾಣುತ್ತಿದೆ.

ಕಲಬುರಗಿ,ಆ.23–ಸಚಿವ ಬಿ.ನಾಗೇಂದ್ರ ಅವರ ರಾಜೀನಾಮೆಗೆ ಒತ್ತಾಯಿಸಿ ರಾಜ್ಯವಿಧಾನಸಭಾ ಅಧಿವೇಶನದ ಕಲಾಪಕ್ಕೆ ಬಿಜೆಪಿ ಪದೇಪದೆ ಅಡ್ಡಿಪಡಿಸುತ್ತಿರುವುದನ್ನು ರಾಜ್ಯದ ಸಣ್ಣ ನೀರಾವರಿ, ವಿಜ್ಞಾನಮತ್ತು ತಂತ್ರಜ್ಞಾನ ಸಚಿವ ಡಾ.ಅಜಯ್ ಧರ್ಮಸಿಂಗ್ ಖಂಡಿಸಿದರು.ನಗರದ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಕಚೇರಿಯಲ್ಲಿ ಇಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಬರಗಾಲ ಪರಿಸ್ಥಿತಿ ಇದೆ. ಈ ಬಗ್ಗೆ ಅಧಿವೇಶದಲ್ಲಿ ಚರ್ಚೆ ನಡೆಸುವ ಬದಲು ಕೊಳ್ಳಲುವಿಧಾನಮಂಡಲವೇದಿ ಕೆಯಾಗಿ'ಬೇಕು.ಆದರೆ, ಬಿಜೆಪಿ ಉದ್ದೇಶಪೂರ್ವಕವಾಗಿ ಕಲಾಪಕ್ಕೆ ಅಡ್ಡಿಪಡಿಸುತ್ತಿದೆ ಎಂದು ಹೇಳಿದರು.



ಬಿಜೆಪಿ ಪದೇಪದೆ ಅಡ್ಡಿಪಡಿಸುತ್ತಿರುವುದನ್ನು ಸಚಿವ ನಾಗೇಂದ್ರ ಅವರ ರಾಜೀನಾಮೆಗೆ ಒತ್ತಾಯಿಸುವ ಮೂಲಕ ಬಿಜೆಪಿ ಸದನದ ಕಲಾಪವನ್ನು ಹಾಳುಗೆಡುವುತ್ತಿದೆ ಎಂದುಆಕ್ರೋಶ ವ್ಯಕ್ತಪಡಿಸಿದರು.ಜನರಿಗೆ ಸಂಬಂಧಿಸಿದ ಪ್ರಮುಖ ಸಮಸ್ಯೆಗಳ ಕುರಿತು ಚರ್ಚಿಸಿಪರಿಹಾರ ಕಂಡುಕೇಂದ್ರದಲ್ಲಿನ ಅನೇಕ ಜನ ಬಿಜೆಪಿ ಸಚಿವರು ಮತ್ತು ಶಾಸಕರಮೇಲೆ ಆರೋಪಗಳಿವೆ. ಅವರೆಲ್ಲರು ರಾಜೀನಾಮೆನೀಡಿದ್ದಾರೆಯೇ ಎಂದು ಪ್ರಶ್ನಿಸಿದ ಅವರು,ಆರೋಪ ಎದುರಿಸುತ್ತಿರುವ ಕೇಂದ್ರದ ಅನೇಕ ಜನ ಬಿಜೆಪಿ ಸಚಿವರು ಮತ್ತು ಶಾಸಕರು ರಾಜೀನಾಮೆ ನೀಡಲಿ ನಾವುನೀಡುತ್ತೇವೆ ಎಂದರು.ಸ್ವಾತಂತ್ರ್ಯಕ್ಕೂ ಮುನ್ನವೇ 'ವಂದೇ ಮಾತರಂ' ಗೀತೆಯ ಮೊದಲ ಎರಡು ಚರಣಗಳನ್ನು ಮಾತ್ರ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಹಾಡುವ ನಿರ್ಧಾರ ಮಾಡಲಾಗಿದೆ. ಕಾಂಗ್ರೆಸ್‌ಇಂದಿಗೂ ಅದೇ ಪರಂಪರೆಯನ್ನು ಮುಂದುವರಿಸುತ್ತಿದೆಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು ಕಾಂಗ್ರೆಸ್ ಪಕ್ಷದಲ್ಲಿ ಅನೇಕ ಜನ ಸ್ವಾತಂತ್ರ್ಯ ಹೋರಾಟಗಾರರಿದ್ದಾರೆ.

ಇಷ್ಟಲಿಂಗ ಪೂಜೆ ಮತ್ತು ಲಿಂಗಾಚಾರವು ಆತ್ಮಜ್ಞಾನ ಮತ್ತು ಶಿವಾನುಭವದ ಮಾರ್ಗ : ಪೂಜ್ಯ ಡಾ ಸದಾಶಿವ ಸ್ವಾಮೀಜಿ

ಸೇಡಂ,ಆ,24: ಮಾನವ ಬದುಕಿನ ಸೋಪಾನ ಶ್ರಾವಣ ಸತ್ಸಂಗ ಸರಣಿ –9ರಅನುಭಾವ ಕಾರ್ಯಕ್ರಮವು ಸೇಡಮ್ ನಗರದ ಶರಣ ಶ್ರೀ ಜಗನಾಥ ಕಿರಣಗಿ ಅವರ ನಿವಾಸದಲ್ಲಿಭಕ್ತಿ ಪೂರ್ವಕವಾಗಿ ಜರುಗಿತು.

ಸೇಡಮ್‌ನಗರದ ಆರಾಧ್ಯ ದೈವಶ್ರೀಕೊತ್ತಲ ಬಸವೇಶ್ವರ ದೇವಾಲಯದ ಪೂಜ್ಯರಾದ ಶ್ರೀ ಡಾ ಸದಾಶಿವಸ್ವಾಮಿ ಗಳು *ಅನುಭಾವದ ನುಡಿಗೈಯುತ್ತಾ,ಶರಣ ಪರಂಪರೆಯಲ್ಲಿ ಪಂಚಾಚಾರಗಳು ಭಕ್ತರ ಆಧ್ಯಾತ್ಮಿಕಬದುಕಿನ ಸೂತ್ರಗಳಾಗಿದ್ದುಜನರ ಬದುಕನ್ನುಸಾರ್ಥಕಗೊಳಿಸುವ ಧಾರ್ಮಿಕ ಮಾರ್ಗಗಳಾಗಿವೆ ಎನ್ನುತ್ತಾ, ಮೊದಲನೇ ಪಂಚಾಚಾರವಾದ ಲಿಂಗಾಚಾರವು ವ್ಯಕ್ತಿಯ ಅಂತರಂಗ ಶುದ್ಧಿ ಮತ್ತು ಶಿವಸ್ಮರಣೆಯ ಪ್ರಮುಖ ಶಿವಮಾರ್ಗವಾಗಿದೆ ಎಂದರು.ಶ್ರೀಗಳು ಮುಂದುವರೆದು, ಇಷ್ಟಲಿಂಗ ಪೂಜೆ, ನಿತ್ಯ ಲಿಂಗ ಪೂಜೆ,ಲಿಂಗ ಸ್ಮರಣೆ ಯೊಂದಿಗೆ ಶಿವಸ್ಮರಣೆಯ ಮೂಲಕ ಲಿಂಗತತ್ವವನ್ನು ಬದುಕಿನಲ್ಲಿ ಅಳವಡಿಸಿಕೊಳ್ಳುವದೇ ನಿಜವಾದಲಿಂಗಾಚಾರವೆಂದರು.ಸೇಡಮ್ ನಗರದ ಶರಣ ಶ್ರೀ ಜಗನಾಥ



ಕಿರಣಗಿಅವರ ನಿವಾಸದಲ್ಲಿ ಭಕ್ತಿ ಪೂರ್ವಕವಾಗಿ ಜರುಗಿತು

Prop: Swamidas

SURAKSHA SECURITY

Cell: 8861550016, 8217896220

Security Guard Jobs, House Keeping,

Panchasheel Kutir, Near Emmanuel Methodist Church, Nawadgeri, Janwada Road, Bidar-

ರಸ್ತೆ ದುರಸ್ತಿಪಡಿಸದಿದ್ದರೆ ಪಿಡಬ್ಲ್ಯೂಡಿ ಕಚೇರಿ ಎದುರು ಪ್ರತಿಭಟನೆ



ಬೀದರ್: ಹಾಳಾದ ಔರಾದ್ ವಿಧಾನಸಭಾ ಕ್ಷೇತ್ರದ ರಸ್ತೆಗಳನ್ನು ದುರಸ್ತಿಪಡಿಸದಿದ್ದರೆ ಬೀದರನ ಲೋಕೋಪಯೋಗಿ ಇಲಾಖೆಕಾಯ ರ್ನಿವಾರ್ಹಕ ಎಂಜಿನಿಯರ್ ಕಚೇರಿಎದುರು ಪ್ರತಿಭಟನೆ ನಡೆಸಲಾಗುವುದು ಎಂದು ಕರ್ನಾಟಕ ರಕ್ಷಣಾ ವೇದಿಕೆಯಜಿಲ್ಲಾ ಘಟನದ ಅಧ್ಯಕ್ಷ ಸೋಮನಾಥ ಮುಧೋಳ ಎಚ್ಚರಿಕೆ ನೀಡಿದ್ದಾರೆ.ಕ್ಷೇತ್ರದಲ್ಲಿ ಲೋಕೋಪಯೋಗಿ ಇಲಾಖೆ ಅಧೀನದ ಅನೇಕ ಜಿಲ್ಲಾ ಮುಖ್ಯ ರಸ್ತೆಗಳು ತೀವ್ರವಾಗಿ ಹದಗೆಟ್ಟಿವೆ. ಹೀಗಾಗಿ ಪ್ರಯಾಣಿಕರು ಸಂಚಾರಕ್ಕೆಬಹಳ ತೊಂದರೆ ಅನುಭವಿಸುವಂತಾಗಿದೆ ಎಂದು ತಿಳಿಸಿದ್ದಾರೆ. ಠಾಣಾಕುಶನೂರು–ಮುಧೋಳ್, ಔರಾದ್–ಮುಧೋಳ, ತೆಲಂಗಾಣ ಗಡಿ–ಸುಂದಾಳ–ಇಟಗ್ಯಾಳ್‌ಚಿಂತಾಕಿ–ರಾಯಪಳ್ಳಿ ಕ್ರಾಸ್, ಚಿಂತಾಕಿ–ತುಳಜಾಪುರ,ಎಕಲಾರ್–ಬೆಲ್ದಾಳ್ ಮತ್ತಿತರ ರಸ್ತೆಗಳ ಉದ್ದಕ್ಕೂ ತಗ್ಗು ದಿನ್ನೆಗಳು ಸೃಷ್ಟಿಯಾಗಿವೆ ಎಂದು ಹೇಳಿದ್ದಾರೆ. ನಿತ್ಯನೂರಾರು ವಾಹನಗಳು ಸಂಚರಿಸುವ ರಸ್ತೆಗಳಸ್ಥಿತಿ ಅಧೋಗತಿಯಾಗಿದೆ. ವಾಹನಗಳು ಅನಿವಾರ್ಯವಾಗಿ ಸರ್ಕಸ್ ಮಾಡುತ್ತಾ ಸಾಗಬೇಕಾಗಿದೆ ಎಂದು ತಿಳಿಸಿದ್ದಾರೆ.

ಅರ್ಹ ನಾಗರಿಕರು ಮತದಾರರ ಪಟ್ಟಿಯಿಂದ ಹೊರಗುಳಿಯದಿರಲಿ: ಶಾಸಕ ಚವ್ಹಾಣ



ಔರಾದ್ ಎಸ್‌ಐಆರ್ ಪ್ರಕ್ರಿಯೆಯ ಮೊದಲ ಹಂತ ಪೂರ್ಣಗೊಂಡಿದ್ದು, ಕರಡು ಮತದಾರರ ಪಟ್ಟಿ ಪ್ರಕಟಗೊಳ್ಳಲಿರುವ ಹಿನ್ನೆಲೆಯಲ್ಲಿಅರ್ಹ ನಾಗರಿಕರು ಮತದಾರರ ಪಟ್ಟಿಯಿಂದ ಹೊರಗುಳಿಯದಂತೆ ಕಾರ್ಯಕರ್ತರು ಎಚ್ಚರಿಕೆಯಿಂದ ಕಾರ್ಯನಿರ್ವಹಿಸಬೇಕು ಎಂದು ಶಾಸಕರುಪ್ರಭು ಬಿ.ಚವ್ಹಾಣ ಅವರು ತಿಳಿಸಿದರು. ಭಾರತೀಯ ಜನತಾ ಪಾರ್ಟಿ ಔರಾದ(ಬಿ) ಮಂಡಲದ ವತಿಯಿಂದ ಭಾನುವಾರ ಪಟ್ಟಣದ ಸಾಯಿಕಲ್ಯಾಣ ಮಂಟಪದಲ್ಲಿ ಆಯೋಜಿಸಿದ್ದ ಬಿಎಲ್‌ಎ–2 ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು ಎಸ್‌ಐಆರ್ ಮೊದಲ ನೇಹಂತ ಪೂರ್ಣಗೊಂಡಿದ್ದು, ಇದೀಗ ಕರಡು ಮತದಾರರ ಪಟ್ಟಿ ಪ್ರಕಟಗೊಳ್ಳಲಿದೆ. ಈ ಹಿನ್ನೆಲೆಯಲ್ಲಿ ತಮ್ಮ ವ್ಯಾಪ್ತಿಯಲ್ಲಿರುವ ಮತದಾರರಯಾ ಹಿತಿಯನ್ನು ಪರಿಶೀಲಿಸಿ, ಅರ್ಹ ಮತದಾರರ ಹೆಸರುಗಳು ಕರಡು ಪಟ್ಟಿಯಲ್ಲಿ ಇರುವುದನ್ನು ಖಚಿತಪಡಿಸಿಕೊಳ್ಳಬೇಕು ಎಂದು ಬಿಎಲ್‌ಎ–2ಗಳಿಗೆ ಸೂಚಿಸಿದರು. ಮತದಾನ ಕೇವಲ ಹಕ್ಕು ಮಾತ್ರವಲ್ಲ, ದೇಶದ ಭವಿಷ್ಯವನ್ನು ರೂಪಿಸುವಜವಾಬ್ದಾರಿಯೂಆಗಿದೆ. ಪ್ರತಿಯೊಂದುಮತವೂ ಜನಪ್ರತಿನಿಧಿಗಳ ಆಯ್ಕೆಯಲ್ಲಿ ಮಹತ್ವದಪಾತ್ರ ವಹಿಸುತ್ತದೆ.

ಶಿವಾನಿ ಈಗ ಸಾಂಸ್ಕೃತಿಕ ರಾಯಭಾರಿ: ಎಂಟು ಪ್ರಶಸ್ತಿಗಳ ಒಡತಿ

ಬೀದರ್: ಅಖಿಲ ಭಾರತ ಗಂಧರ್ವ ಮಹಾವಿದ್ಯಾಲಯ , ಮುಂಬೈ ವತಿಯಿಂದ ನವೆಂಬರ್–ಡಿಸೆಂಬರ್ 2024ರಲ್ಲಿ ನಡೆದ ಸಂಗೀತ ವಿಶಾರದ ಪರೀಕ್ಷೆಯಲ್ಲಿ ದೇಶಕ್ಕೆ ಪ್ರಥಮ ರ್ಯಾಂಕ್ ಗಳಿಸುವುದರ ಜೊತೆಗೆ ಗಾಯನ ವಿಷಯದಲ್ಲಿಯೂ ಅತ್ಯುನ್ನತ ಅಂಕಗಳನ್ನು ಪಡೆದಿರುವ ಬೀದ???ನ ಖ್ಯಾತ ಗಾಯಕಿ ಕು. ಶಿವಾನಿ ಶಿವದಾಸ ಸ್ವಾಮಿ ಅವರು ಒಟ್ಟು ಎಂಟು ಪ್ರತಿಷ್ಠಿತ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

ಈ ಹಿನ್ನೆಲೆಯಲ್ಲಿ ಭಾನುವಾರ ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಸ್ವತಃ ಮಾತನಾಡಿದ ಕು.ಶಿವಾನಿ ಶಿವದಾಸ ಸ್ವಾಮಿ, ಈ ಸಾಧನೆ ತನ್ನ ಜೀವನದ ಮಹತ್ವದ ಮೈಲಿಗಲ್ಲಾಗಿದ್ದು,, ದೇಶದಾದ್ಯಂತ ತನ್ನ ಪ್ರತಿಭೆಯನ್ನು ಗುರುತಿಸಿರುವುದು ಸಂತಸ ತಂದಿದೆ ಎಂದು ಹೇಳಿದರು.



ಅಜಯ್ ಸಿಂಗ್ ಅವರಿಗೆ ಠಾಕೂರ್ ಪರಿವಾರದಿಂದ ಭವ್ಯ ಸ್ವಾಗತ



ಹುಮನಾಬಾದ್ : ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾಗಿ ಜವಾಬ್ದಾರಿ ವಹಿಸಿಕೊಂಡ ಬಳಿಕ ಪ್ರಥಮ ಬಾರಿಗೆ ಹುಮನಾಬಾದ್ ಪಟ್ಟಣಕ್ಕೆ ಆಗಿಮಿಸಿದ ಸನ್ಮಾನ್ಯ ಶ್ರೀ ಡಾ. ಅಜಯ್ ಸಿಂಗ್ ಅವರನ್ನು ಠಾಕೂರ್ ಧಾಬಾದ ಮಾಲೀಕರು ಮತ್ತು ಉದ್ಯಮಿಗಳಾದ ಶ್ರೀ ನಾಗೇಂದ್ರ ಪ್ರಸಾಪಸಿಂಗ್ ಧಾಬಾ ಅವರು ಆತ್ಮೀಯವಾಗಿ ಸ್ವಾಗತಿಸಿದರು. ನಂತರ ಮಾನ್ಯ ಸಚಿವರಾದ ಶ್ರೀ ಡಾ. ಅಜಯ್ ಸಿಂಗ್ ಅವರೊಂದಿಗೆ ಆತ್ಮೀಯವಾಗಿ ಮಾತುಕತೆ ನಡೆಸಿದರು.ಈ ಸಂದರ್ಭದಲ್ಲಿ ನಾಗೇಂದ್ರ ಪ್ರಸಾಪಸಿಂಗ್ ಧಾಬಾ, ಚಂದ್ರಾಸಿಂಗ್ , ಮಲ್ಲಕಣ್ಣ, ಆದಿತ್ಯನಾಥ್ , ಮೀರಾಜ್ ಬೋಸ್ , ಗುರುರಾಜ್ ಹುಮ ನಾಬಾದ್, ಶಂಕೇತ್ ದುಬಲಗುಂಡಿ, ಆರ್, ಎಸ್‌ಯಾದವ್ , ಸಿದ್ರಾಮಪ್ಪ, ಪಂಡೀತ, ಮಾಜಿ ತಾಲ್ಲೂಕು ಪಂಚಾಯಿತಿ ಅಧ್ಯಕ್ಷ ಅಪ್ಪ ಸಾಹೇಬ್, ಆರ್ , ಕೆ, ಪ್ರೀಂಟರ್ ಮಾಲೀಕ ಮಹಾದೇವ, ಸೋಮುನಂದಿ ತಡೋಳಾರನ್ನುಸಿಂಗ್ ಕಲಬುರ್ಗಿ,ದತ್ತುಪದ್ಮಾ ಮಂತಾಳ್, ಪ್ರದಿ ಪ್‌ಸಿಂಗ್ ತಡೋಳಾ, ಫಯಾಜ್ ಜಮಾದಾರ್, ಮಸ್ತಾನ್ ತಡೋಳಾ, ಫೀರೋಜ್ ತಡೋಳಾ ಸೇರಿದಂತೆ ಇತರರು ಇದ್ದರು.(ಬಾಕ್ಸ್‌ಸುದ್ದಿ) ಕರ್ನಾಟಕ ರಾಜ್ಯದ ಮಾಜಿಮುಖ್ಯ ಮಂತ್ರಿಗ ಳಾದ ಸನ್ಮಾನ್ಯ ಶ್ರೀ ದಿ. ಧರ್ಮ್ ಸಿಂಗ್ ಅವರು ಹುಮನಾಬಾದ್ ಪಟ್ಟಣ ಸೇರಿದಂತೆ ಬೀದರ್‌ಜಿಲ್ಲೆಗೆ ಆಗಮಿಸಿದಾಗಹು ಮನಾಬಾದ್ ಪಟ್ಟಣದಹೊರ ವಲಯದಉದ್ಯ ಮಿನಾಗ ೇಂದ್ರ ಪ್ರಸಾಪ ಸಿಂಗ್ ಅವರ ಧಾಬಾಕ್ಕೆ ತಪ್ಪದೇ ಆಗಮಿಸಿ ತಮ್ಮ ನೆಚ್ಚಿನ ಆಹಾರವನ್ನುಸೇವಿಸುತ್ತಿದ್ದರು.

ಆದ್ಮಿ ಪಕ್ಷ ಬಲವರ್ಧನೆ

ಬೀದರ್: ಜಿಲ್ಲೆಯಲ್ಲಿ ಆಮ್ ಆದ್ಮಿ ಪಕ್ಷ ಬಲ ಹೆಚ್ಚಿಸಿಕೊಳ್ಳುತ್ತಿದೆ ಎಂದು ಪಕ್ಷದಉತ್ತರ ಕರ್ನಾಟಕ ಸಂಘಟನಾಕಾರ್ಯದರ್ಶಿಅರ್ಜುನರಾವ್ ಹಲಗೆಗೌಡರುಹೇಳಿದರು.ನಗರದ ಚಿದ್ರಿ ರಿಂಗ್ ರಸ್ತೆಯಲ್ಲಿರುವ ನ್ಯೂಆದರ್ಶಕಾಲೊನಿಯಲ್ಲಿಆಮ್‌ಆದ್ಮಿಪಕ್ಷದ ಬೀದರ್‌ದಕ್ಷಿಣ ಘಟಕದ ಕಚೇರಿಉದ್ಘಾಟನಾ ಕಾರ್ಯಕ್ರಮ ದಲ್ಲಿಅವರುಮಾತನಾಡಿದರು.ಜಿಲ್ಲೆಯಲ್ಲಿ ಬರುವ ದಿನಗಳಲ್ಲಿ ಪಕ್ಷದ ಚಟುವಟಿಕೆಗಳು ಮತ್ತಷ್ಟು ಚುರುಕುಗೊಳ್ಳಲಿವೆ ಎಂದು ತಿಳಿಸಿದರು. 2028 ರ ವಿಧಾನಸಭೆ ಚುನಾವಣೆಯಲ್ಲಿ ರಾಜ್ಯದಲ್ಲಿ ಆಡಳಿತದ ಚುಕ್ಕಾಣಿ ಹಿಡಿಯುವುದು ಆಮ್ ಆದ್ಮಿಪಕ್ಷದ ಗುರಿಯಾಗಿದೆ ಎಂದುಅಧ್ಯಕ್ಷತೆ ವಹಿಸಿದ್ದ ಪಕ್ಷದಜಿಲ್ಲಾಘಟಕ ದಉಪಾಧ್ಯಕ್ಷರಾಜ ಕುಮಾರಎನ್.ಪಾಟೀಲ ಹೇಳಿದರು.ಪಕ್ಷಅಧಿಕಾರಕ್ಕೆ ಬಂದರೆರಾಜ್ಯದಜನರಿಗೆಉಚಿತವೈದ್ಯಕೀಯ ಸೇವಾಹಾಗೂಮಕ್ಕಳಿಗಉಚಿತ ಶಿಕ್ಷಣಒದಗಿಸುವಉದ್ದೇಶಹೊಂದಿದೆಎಂದುತಿಳಿಸಿದರು.ಪಕ್ಷದ ಬರಗಿಬೀದರ್–ಯಾದಗಿರಿ ಉಸ್ತುವಾರಿ ದೀಪಕ್ ಮಾಲಗಾರ್ ಹಾಗೂ ಜಿಲ್ಲಾ ಘಟಕದ ಅಧ್ಯಕ್ಷ ಸಿದ್ದಪ್ಪ ಪುಲಾರಿಅವರುಪಕ್ಷದ ಧ್ಯೇಯೋದ್ದೇಶಗಳ ಕುರಿತು ಮಾತನಾಡಿದರು.



ಮಾನವ ಹಕ್ಕುಗಳ ಜಾಗೃತಿ ಕಾರ್ಯಕ್ರಮ



ಬೀದರ್: ಔರಾದ್ ತಾಲ್ಲೂಕಿನ ನಾಗೂರ(ಎಂ) ಗ್ರಾಮದಲ್ಲಿ ಮಾನವ ಹಕ್ಕುಗಳ ಕುರಿತ ಜಾಗೃತಿ ಕಾರ್ಯಕ್ರಮ ಭಾನುವಾರ ನಡೆಯಿತು.

ಮಾನವ ಹಕ್ಕುಗಳ ರಕ್ಷಣೆ ಪ್ರತಿಯೊಬ್ಬರ ಕರ್ತವ್ಯವಾಗಿದೆ ಎಂದು ಹ್ಯೂಮನ್ ರೈಟ್ಸ್ ಎನ್‌ಫೋರ್ಸ್‌ಮೆಂಟ್ ಕೌನ್ಸಿಲ್ ಆಫ್ ಇಂಡಿಯಾ ಅಧ್ಯಕ್ಷ ಈದುರು ಪದ್ಮಾಕರ ಹೇಳಿದರು.

ಜೀವಿಸುವ ಹಕ್ಕು ಸೇರಿದಂತೆ ಮಾನವನಿಗೆ ಹಲವು ಹಕ್ಕುಗಳು ಇವೆ ಎಂದು ತಿಳಿಸಿದರು.

ಹ್ಯೂಮನ್ ರೈಟ್ಸ್ ಎನ್‌ಫೋರ್ಸಮೆಂಟ್ ಕೌನ್ಸಿಲ್ ಆಫ್ ಇಂಡಿಯಾ ಮಂಡಲ ಅಧ್ಯಕ್ಷ ಜೀವನ್ ನಾಗೂರೆ, ಮಹಾರಾಷ್ಟ್ರದ ಜಾನ್ಸನ್, ಹೈದರಾಬಾದನ ಬೆಂಜಮಿನ್, ವಿಜಯವಾಡದ ಅಬ್ರಾಹಂ, ಗಂಟಾ ದೇವಾನಂದ, ಬಾಬುರಾವ್ ಮತ್ತಿತರರು ಇದ್ದರು. ಹ್ಯೂಮನ್ ರೈಟ್ಸ್ ಎನ್‌ಫೋರ್ಸ್‌ಮೆಂಟ್ ಕೌನ್ಸಿಲ್ ಆಫ್ ಇಂಡಿಯಾ ವತಿಯಿಂದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.



KAILASH JEWELLER



USMAN GUNJ BIDAR-585 401

PROP: GANESH CELL: 94485677944

DHANVANTRY AYURVEDIK



OLD SERVICE STAND, INDIA BANK OPPOSITE BIDAR-585401

Owned By.ARVIND KUMAR ARALI, S.KUMAR MARKETING &PRINTERS SHOP NO: 9-4-62 AND 9-4-63/A CHANDRAKALA COMPLEXKHAJI COLONY OPP:NANDI PETROLPUMP, BIDAR, KARANTAKA-585 403